ಇ) ಸಹಾಯಧನ ನಿಲ್ಲಿಸಲು ಸರ್ಕಾರ ಏನಾದರೂ ಚಿಂತನೆ ನಡೆಸಿದೆಯೇ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು): ಅ) ದಿನಾಂಕ 1-1-1999 ರಿಂದ ಸಹಾಯಧನ ನೀಡಲು ಬಾಕಿ ಇರುತ್ತದೆ. ದಿನಾಂಕ 31-1-2003ರ ಅಂತ್ಯಕ್ಕೆ ರೂ. 400.67 ಕೋಟಿ ಸಹಾಯಧನ ನೀಡಲು ಬಾಕಿ ಇರುತ್ತದೆ. ಪ್ರತಿ ಸಾಲಿನ ಬಾಕಿ ಹಣದ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ವರ್ಷ	ಘಟಕಗಳ ಸಂಖ್ಯೆ	ಬಾಕಿ ಇರುವ ಮೊತ್ತ
1-1-1999 ರಿಂದ 31-3-99	1626	13.15
1999-2000	6533	189.64
2000-01	5200	112.46
2001-02	3565	75.73
2002-03 (31-1-2003	1046	9.69
ಒಟ್ಟು	**17970**	**400.67**

ಆ) ಸಹಾಯಧನ ಬಿಡುಗಡೆಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಈ ದಿಶೆಯಲ್ಲಿ ಸಾಕಷ್ಟು ಸಂಪನ್ಮೂಲ ಒದಗಿಸಲು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಲಾಗುತ್ತಿದೆ.

ಇ) 2001-06ನೇ ಸಾಲಿನ ಹೊಸ ಕೈಗಾರಿಕಾ ನೀತಿಯಲ್ಲಿ ಪ್ರಕಟಿಸಿದಂತೆ, ಸದ್ಯಕ್ಕೆ ಸಹಾಯಧನ ಯೋಜನೆ ಬಗ್ಗೆ ಸ್ಥಗಿತಗೊಳಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮರಳು ತೆಗೆಯಲು ಅನುಮತಿ

1558 (2032) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಸ್ಥಳಗಳನ್ನು ಮರಳು ತೆಗೆಯಲು ಹರಾಜು ಮಾಡಲಾಗಿದೆ; (ವಿಸ್ತೀರ್ಣ, ಸರ್ವೆ ನಂಬರ್‌ಗಳು, ಹರಾಜುದಾರರ ಹೆಸರು ಒದಗಿಸುವುದು)

ಆ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಈ ಹರಾಜಿನಿಂದ ಸಂಗ್ರಹವಾದ ಮೊತ್ತ ಎಷ್ಟು;

ಇ) ಹರಾಜು ಮಾಡದೆ ಕಳೆದ ಸಾಲಿನ ಗುತ್ತಿಗೆಯನ್ನು ಮುಂದುವರೆಸಿದ ಪ್ರಕರಣ ಎಷ್ಟು;

ಈ) ಅನೇಕ ಸ್ಥಳಗಳಲ್ಲಿ ಪರವಾನಿಗಿ ಇಲ್ಲದೆ ಅಥವಾ ನಿಗದಿತ ಹರಾಜು ಮಾಡದೆ ಮರಳು ತೆಗೆಯುತ್ತಿರುವುದು ಮತ್ತು ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು): ಅ) ಇದುವರೆಗೂ ತೀರ್ಥಹಳ್ಳಿ ತಾಲ್ಲೂಕಿನ ಒಟ್ಟು 28 ಸ್ಥಳಗಳಿಗೆ ಹರಾಜು ಮಾಡಲಾಗಿದೆ. 6 ಸ್ಥಳಗಳ ಬಗ್ಗೆ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಬಾಕಿ ಇರುವುದರಿಂದ ಅವುಗಳಿಗೆ ಹರಾಜು ಮಾಡಲಾಗಿರುವುದಿಲ್ಲ. ಹರಾಜು ವಿವರ ಕೆಳಕಂಡಂತಿದೆ.

ಗ್ರಾಮ	ವಿಸ್ತೀರ್ಣ	ಸರ್ವೆ ನಂ.	ಗುತ್ತಿಗೆ ಪಡೆದವರು ಶ್ರೀಯುತರಾದ:
1	2	3	4
1. ಮಹಿಷಿ	4-00	38,40	ಹೆಚ್. ಸುಭಾಶ್
2. ಲಿಂಗಾಪುರ	2-00	153	ಅನಾವುಲ್ಲಾ
3. ಲಿಂಗಾಪುರ	3-00	99	ಅಧ್ಯಕ್ಷರು, ನೂರಿ ಜಾಮಿಯಾ ಮಸೀದಿ, ಮಂಡಗದ್ದೆ
4. ಮಹಿಷಿ	5-00	24	ಎಸ್.ಟಿ. ಕೃಷ್ಣೇಗೌಡ
5. ಮಹಿಷಿ	9-00	24	ವೈ.ಹೆಚ್. ನಾಗರಾಜ್
6. ಲಿಂಗಾಪುರ	9-00	98,99 100, 101	ಎಂ.ಕೆ. ಕೈಪಾಲ್
7. ಬಿಕ್ಸಿಕಾಂಚಿಗುಡ್ಡ	6-00	64	ಬಿ.ಡಿ. ಸುಧಿನ
8. ಹೆದ್ದೂರು	1-00	32	ಕೆ.ಎನ್. ರಾಮಕೃಷ್ಣ
9. ಮುಳುಬಾಗಿಲು	0-20	01	ಕೆ. ಬಾಸ್ಕರ್ ಶೆಟ್ಟಿ
10. ಬೆಳುವ ಬೆಕ್ಸಿ ಕಾಂಚಿ ಗುಡ್ಡ	5-00	64	ಪ್ರಶಾಂತ್ ಕುಮಾರ್
11. ಹೆದ್ದೂರು	6-00	24	ಕೆ.ಟಿ. ನಟರಾಜ್
12. ತೀರ್ಥಹಳ್ಳಿ (ಕುಶಾಪತಿ	1-00	70	ಸಿ.ಎನ್. ಶಂಕರಪ್ಪ
13. ಲಿಂಗಾಪುರ	3-00	99	ನೂರಿ ಜಾಮಿಯಾ ಮಸೀದೀ (ಮರು ಹರಾಜು)
14. ಲಿಂಗಾಪುರ	2-00	143, 153	ಸಯ್ಯದ್ ಮಜಿಹರ್
15. ಮಹಿಷಿ	4-00	ಊರುಜಾಗ	ಎಂ.ಪಿ. ತಾರಾನಾಥ್
16. ಜಿಂಬುವಳ್ಳಿ	10-00	59, 61	ಎಸ್. ಸೇತುರಾಂ
17. ತೀರ್ಥಹಳ್ಳಿ (ಕುಶಾವತಿ)	6-20	70	ಸಿ.ಎನ್. ಶಂಕರಪ್ಪ
18. ಬುಕ್ಲಾಪುರ	5-00	18, 248, 250	ಸರ್ವೋತ್ತಮನಾಯಕ್
19. ಮಾಡುವಳ್ಳಿ	10-00	180, 181	ಕೆ.ಜಿ. ಕುಮಾರಸ್ವಾಮಿ
20. ಹುಣಸಹಳ್ಳಿ	1-00	13	ಕೆ.ಎನ್. ರಾಮಕೃಷ್ಣ
21. ಮಳಲೂರು	4-20	234	ಹೆಚ್.ಎಸ್. ಜಯರಾಂ
22. ಕೊಡಿಗೆ	3-00	3	ಕೆ.ಟಿ. ಕೃಪಾಲ್
23. ಲಿಂಗಾಪುರ	2-00	129, 131	ಸಯ್ಯದ್ ರಾಜೀರ್
24. ಮುಳುಬಾಗಿಲು	2-00	96	ಸಯ್ಯದ್ ಜುಲ್ಲೀಕರ್
25. ಮಾಡುವಳ್ಳಿ	17-00	146	ಮಥಾನ್

1	2	3	4
26. ಹೆದ್ದೂರು	15-00	24	ಎಸ್.ಟಿ. ಕೃಷ್ಣೇಗೌಡ
27. ಹೊಳೇಕೊಪ್ಪ	1-00-	67	ನವೀನ್
28. ಹೊಳೇಕೊಪ್ಪ	3-00	78	ನಟರಾಜ್

ಅ) ಈ ಹರಾಜಿನಿಂದ ಇದುವರೆಗೂ ಒಟ್ಟು ರೂ. 21,64,250-00 ಸಂಗ್ರಹವಾಗಿದೆ.

ಇ) ಅಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ.

ಈ) ಅಂತಹ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಎಲ್ಲಾ ಕಡೆ ಬಹಿರಂಗ ಹರಾಜು ಮಾಡಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದ್ದು, ಹರಾಜಿಗಿಂತ ಮುಂಚೆ ಇಲಾಖೆಯಿಂದ 5 ವರ್ಷದ ಅವಧಿಗೆ ಮಂಜೂರಾಗಿರುವ ಮರಳು ಗುತ್ತಿಗೆಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳ ಅವಧಿ ಮುಗಿದ ನಂತರ ಹರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರ ಕಲ್ಯಾಣ

1559 (2033) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕಲ್ಯಾಣಕ್ಕೆ ವಿವಿಧ ಇಲಾಖೆಯಡಿಯಲ್ಲಿ ಸರ್ಕಾರ ನಿಗದಿಪಡಿಸಿದ ಮೊತ್ತ ಎಷ್ಟು; ಈವರೆಗೆ ಖರ್ಚಾದ ಹಣ ಎಷ್ಟು?

2) ಪೂರ್ಣ ಹಣ ಬಿಡುಗಡೆಯಾಗದಿದ್ದಲ್ಲಿ ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1) 2002-03ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆಯಡಿ ಒದಗಿಸಿದ ಅನುದಾನ, ಜನವರಿ ಅಂತ್ಯದವರೆಗೆ ಖರ್ಚಾದ ಅನುದಾನ ವಿವರ ಈ ಕೆಳಕಂಡಂತಿದೆ:

2) (ರೂ. ಲಕ್ಷಗಳಲ್ಲಿ)

ಕಾರ್ಯಕ್ರಮ	ನಿಗಧಿಪಡಿಸಿದ ಹಣ	ಬಿಡುಗಡೆಯಾದ ಹಣ	ಖರ್ಚಾದ ಹಣ
1. ವಿಶೇಷ ಘಟಕ ಯೋಜನೆ	66740.00	29474.00	29474.00
2. ಗಿರಿಜನ ಉಪ ಯೋಜನೆ	13067.00	6549.47	6549.47

ಪ್ರಸಕ್ತ ಆರ್ಥಿಕ ವರ್ಷದೊಳಗೆ ಉಳಿದ ಹಣವನ್ನು ಬಿಡುಗಡೆ ಮಾಡುವ ಸಂಭವವಿದೆ.

ಮಂಡ್ಯ ಜಿಲ್ಲೆಯಲ್ಲಿ ಶಾದಿಮಹಲ್‌ಗಳ ನಿರ್ಮಾಣ

1561 (2254) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಶಾದಿ ಮಹಲ್‌ಗಳನ್ನು ನಿರ್ಮಾಣ ಮಾಡಲು ಉದ್ದೇಶವಿದೆಯೇ?

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆ ಬಗೆಗಿನ ವಿವರಗಳೇನು?

ಇ) ಶಾದಿಮಹಲ್‌ಗಳನ್ನು ನಿರ್ಮಾಣ ಮಾಡಲು ಈವರೆಗೆ ಎಷ್ಟು ಅನುದಾನ ನೀಡಲಾಗಿದೆ?